# ಬೃಹತ್ ಬಲ್ಬ್

ಇಲ್ಲಿ ಕಾಣುತ್ತಿರುವ ಎಲೆಕ್ಟ್ರಿಕ್ ಬಲ್ಬ್ ಸುಮಾರು 52 ವರ್ಷ ಹಳೆಯದು. ಇದನ್ನು 1968ರಲ್ಲಿ ನಮ್ಮ ತಂದೆಯವರ ಮದುವೆಯ ಸಂದರ್ಭದಲ್ಲಿ ನಮ್ಮ ತಾತ ತಂದಿದ್ದರಂತೆ. ಇದು ಮೈಸೂರು ಲ್ಯಾಂಪ್ಸ್ ಕಂಪನಿಯ ಉತ್ಪಾದನೆ. ಬಲ್ಬ್ ಸುತ್ತಳತೆ 16 ಇಂಚು, ಉದ್ದ 12 ಇಂಚಿದೆ. ಇದು 500 ವಾಟ್ಸ್ – 250 ವೋಲ್ಟ್ ನದ್ದಾಗಿರುತ್ತದೆ. ಇದು ಇನ್ನೂಸಹ ತನ್ನ ಬೆಳಕನ್ನು ಚೆಲ್ಲುತ್ತಾ ನಸುನಗುತ್ತಿದೆ.

—ವೀಣಾ ರವೀಂದ್ರ, ಮೈಸೂರು



# ರೈತ ಶತ್ರು ಸಿಂಬಳು ಹುಳ

ಪ್ರಕೃತಿಯಲ್ಲಿ ಅನೇಕ ಜೀವಿಗಳನ್ನು ನೋಡಿರುತ್ತೇವೆ. ಒಂದೇ ಪ್ರಭೇದದಲ್ಲಿ ಅನೇಕ ವಿಧಗಳಿರುವುದು ಸೋಜಿಗವೇ ಸರಿ. ಚಿತ್ರದಲ್ಲಿ ಕಾಣಿಸುವ ಈ ಸಿಂಬಳ ಹುಳ ಮೃದ್ವಂಗಿ ಜಾತಿಗೆ ಸೇರಿದೆ. ಮಳೆಗಾಲ ಮತ್ತು ಚಳಿಗಾಲದಲ್ಲಿ ತೇವಾಂಶ ಹೆಚ್ಚಾದಾಗ ಕಂಡುಬರುತ್ತದೆ ನೋಡಲು ಬಸವನ ಹುಳುವಿನಂತೆ ಕಂಡರೂ ಇದು ಕವಚ ರಹಿತವಾಗಿದೆ. ಸುಮಾರು ಮೂರು ಇಂಚುಗಳಷ್ಟಿದ್ದು ಆಪತ್ತು ಎದುರಾದಾಗ ದೇಹ ಮುದಿಡಿಕೊಂಡು ತಲೆಯ ಮುಂಭಾಗದಲ್ಲಿ ಕಾಣುವ ಕೊಂಬುಗಳನ್ನು ಒಳಗಡೆ ಎಳೆದುಕೊಂಡು ವೈರಿಯ ದಿಕ್ಕು ತಪ್ಪಿಸುತ್ತದೆ. ಹುಲ್ಲುಹಾಸು, ಗಿಡಮರಗಳ ಎಲೆಗಳು, ತೇವಾಂಶದ ಮಣ್ಣಿನಲ್ಲಿ ಕೊಳೆತ ಆಹಾರ ಸೇವಿಸುತ್ತದೆ.

ಚಲಿಸುವಾಗ ಬಿಳಿ ಸಿಂಬಳದಂತಹ ದ್ರವವನ್ನು ಬಿಡುತ್ತ ಸಾಗುತ್ತದೆ. ಇದೇ ಕಾರಣಕ್ಕೆ ಇದನ್ನು 'ಸಿಂಬಳು ಹುಳು' ಎಂದು ಕರೆಯುತ್ತಿರಬಹುದು. ಇದು ರೈತನ ಪೈರು, ವಿವಿಧ ಬೆಳೆಗಳ ಹೂಗಳನ್ನು ಆಹಾರವಾಗಿ ಬೆಳೆಗಳನ್ನು ನಾಶಪಡಿಸುತ್ತದೆ. ಹಾಗಾಗಿ ರೈತರು ಇವುಗಳ ನಾಶಕ್ಕೆ ಕೀಟನಾಶಕ ಉಪಯೋಗಿಸುತ್ತಾರೆ.

—ಮೈಲಾರಪ್ಪ ಬೂದಿಹಾಳ ಮುಗಿಲಹಕ್ಕಿ





# ಕಲಾತ್ಮಕ ಕಂಬ

ಉಡುಪಿಯ ಅಷ್ಟಮಠಗಳಲ್ಲೊಂದಾಗಿರುವ ಕೃಷ್ಣಾಪುರ ಮಠದ ಪುರಾತನ ಮೂಲಮಠವು ಮಂಗಳೂರಿನ ಸುರತ್ಕಲ್ ಬಳಿಯ ಕೃಷ್ಣಾಪುರದಲ್ಲಿದೆ. ಅಲ್ಲಿ ಶ್ರೀ ಕೃಷ್ಣನ ಗರ್ಭಗುಡಿ ಎದುರಿನ ಚಾವಡಿಯಲ್ಲಿ ಶತಮಾನಗಳಷ್ಟು ಹಳೆಯದಾದರೂ ಗಟ್ಟಿ ಮುಟ್ಟಾಗಿರುವ ಎರಡು ಬೃಹತ್ ಮರದ ಕಂಬಗಳು ಕಲಾತ್ಮಕವಾಗಿದ್ದು ಫಳಫಳ ಹೊಳೆಯುತ್ತಾ ಭಕ್ತಾದಿಗಳನ್ನು ಆಕರ್ಷಿಸುತ್ತವೆ. ಸುಮಾರು 2 ಅಡಿಗಳಷ್ಟು ವ್ಯಾಸ ಹೊಂದಿರುವ ಈ ಕಂಬಗಳ ಮೇಲ್ಮೈ ಸುತ್ತಲೂ ರಾಮಾಯಣದ ದೃಶ್ಯಗಳನ್ನು ಬಿಂಬಿಸುವ ಮನಮೋಹಕ ಕೆತ್ತನೆಗಳಿವೆ.

ಸಿಮೆಂಟ್ ಕಂಬಗಳಿಗಿಂತಲೂ ಇವು ಸುದೃಢವಾಗಿವೆ. ಪೌರಾಣಿಕ ಕಥೆ ಹೇಳುವ ಚಿತ್ರಗಳು, ಆನೆ, ಕುದುರೆ, ರಥಗಳ ಕುಸುರಿ ಕೆತ್ತನೆಯನ್ನು ಕಂಬದ ಮೇಲ್ತುದಿಗೆ ಹೊಂದಿಕೊಂಡಿರುವ ಮೆಲ್ಹಾವಣಿಯಲ್ಲೂ ಕಾಣಬಹುದಾಗಿದ್ದು ಮನಸಳೆಯುತ್ತವೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ